**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾವಿ**

**ಇವರ ನ್ಯಾಯಾಲಯದಲ್ಲಿ, ಬೆಳಗಾವಿ.**

ಸ್ಪೆಷಲ್ ಕೇಸ ನಂಃ 290/2022

ಪಿಡಬ್ಲು :5 ಸಿಡಬ್ಲು :4

| | |
|---|---|
| ಸಾಕ್ಷಿಯ ಹೆಸರು | : ಶ್ರೀ.ಮಂಜುನಾಥ ಅಂಬಾಜಿ |
| ತಂದೆಯ ಹೆಸರು | : ಶ್ರೀ. ತೀರ್ಥಪ್ಪ |
| ವಯಸ್ಸು | : 48 ವರ್ಷ |
| ಉದ್ಯೋಗ | : ವ್ಯವಸಾಯ |
| ವಾಸ್ತವ್ಯ | : ಸುಟ್ಟಟ್ಟಿ ಗ್ರಾಮ, ತಾಲೂಕುಃ ಅಥಣಿ |
| ದಿನಾಂಕ | : 05-12-2025 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು. |

**ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ**

ಚಾಸಾಃ 5 ಸಿದ್ದಪ್ಪ ಸವದಿ ನನಗೆ ಗೊತ್ತಿರುತ್ತಾರೆ. ಚಾಸಾಃ 1 ಸುನೀಲ ಶಂಕರ ಗಾಡಿವಡ್ಡರ ನನಗೆ ಗೊತ್ತಿರುತ್ತಾರೆ , ಅವರು ನಮ್ಮ ಊರಿನವರು. ಆರೋಪಿತರು ನನಗೆ ಗೊತ್ತಿರುತ್ತಾರೆ, ಅವರು ನಮ್ಮ ಊರಿನವರು.

2. ನನಗೆ ದಿನಾಂಕ ಗೊತ್ತಿರುವುದಿಲ್ಲ, ಸಮಾರು ಐದು ವರ್ಷಗಳ ಹಿಂದೆ ಐಗಳಿ ಪೋಲಿಸರು ನನ್ನನ್ನು ಕರೆಸಿದ್ದರು. ಆ ಸಮಯದಲ್ಲಿ ನಾನು ಆರೋಪಿಗಳ ತೋಟದ ಪಕ್ಕದಲ್ಲಿರುವ ನಮ್ಮ ತೋಟಕ್ಕೆ ಹೋಗುತ್ತಿದ್ದೇನು. ಆಗ ಪೋಲಿಸರು ನನ್ನನ್ನು ಆರೋಪಿತರ ಮನೆಯ ಮುಂದೆ ಕರೆಸಿದ್ದರು. ಸ್ಥಳದಲ್ಲಿ ಐಗಳಿ ಪೋಲಿಸರು, ನಾನು, ಚಾಸಾಃ 5 ಸಿದ್ದಪ್ಪ ಸವದಿ ಮತ್ತು 1 ನೇ ಆರೋಪಿ ಮಲ್ಲಪ್ಪ ಇದ್ದೇವು. ಸ್ಥಳದಲ್ಲಿ ಪೋಲಿಸರು ನನ್ನ ಸಹಿ ಮಾಡಿಸಿಕೊಂಡರು ಮತ್ತು ಪೋಟೋ ತೆಗೆದರು. ಪೋಲಿಸರನ್ನು ನಾನು ವಿಚಾರಿಸಿದ್ದೇನು, ಆದರೆ ಅವರು ನನಗೆ ಏನೂ ಹೇಳಿರುವುದಿಲ್ಲ ನನ್ನ ಸಹಿ ಮಾತ್ರ ಮಾಡಿಸಿಕೊಂಡಿದ್ದಾರೆ.

3. ಪೋಲಿಸರು ಆರೋಪಿತರ ಮನೆ ಬಳಿ ಒಂದು ಪೋಟೋ ತೆಗೆದಿದ್ದಾರೆ ಬೇರೆ ಎಲ್ಲಿ ಪೋಟೋ ತೆಗೆದಿದ್ದಾರೆ ಎಂದು ನನಗೆ ಗೊತ್ತಿಲ್ಲ. ಪೋಲಿಸರು ಸ್ಥಳದಲ್ಲಿ ವಸ್ತುವನ್ನು ತೆಗೆದುಕೊಂಡ ಬಗ್ಗೆ ನನಗೆ ಗೊತ್ತಿಲ್ಲ. ವಾಹನವನ್ನು ಜಪ್ತು ಮಾಡಿಕೊಂಡ ಬಗ್ಗೆ ಸಹ ನನಗೆ ಗೊತ್ತಿರುವುದಿಲ್ಲ.

4. ಆರೋಪಿತರ ಮನೆಯ ಮುಂದೆ ಇರುವ ಬಾವಿಯ ಬಳಿ ಪೋಲಿಸರು ನನ್ನನ್ನು ಕರೆಸಿದ್ದರು. ಬೇರೆ ಎಲ್ಲಿಯೂ ನನ್ನನ್ನು ಕರೆಸಿರುವುದಿಲ್ಲ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿದ್ದು ಅದರ ಮೇಲೆ ತಮ್ಮ ಸಹಿ ಇರುವುದಾಗಿ ಗುರುತಿಸಿರುತ್ತಾರೆ. ಆ ದಾಖಲೆಯು ಮಾಲು ಜಪ್ತು ಪಂಚನಾಮೆ ಆಗಿದ್ದು, ಅದನ್ನು ನಿಪಿ–12 ಎಂದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ–12 [ಎ] ಎಂದು ಗುರುತಿಸಲಾಯಿತು.

**ಈ ಹಂತದಲ್ಲಿ ನ್ಯಾಯಾಲಯದ ಸಮಯ ಮುಗಿದಿದ್ದರಿಂದ ಮುಖ್ಯ ವಿಚಾರಣೆಗಾಗಿ ಮಧ್ಯಾಹ್ನ ಅವಧಿಗೆ ಮುಂದೂಡಲಾಯಿತು.**

**ಸಾಕ್ಷಿಯನ್ನು ಪುನಃ 3.00 ಗಂಟೆಗೆ ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

<u>**ಮುಂದುವರೆದ ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ**</u>

5. ಸಾಕ್ಷಿಗೆ 7 ಪೋಟೋಗಳನ್ನು ತೋರಿಸಿದ್ದು, ಅವುಗಳಲ್ಲಿ ತಮ್ಮ ಇರುವಿಕೆಯನ್ನು, ಚಾಸಾಃ 5 ಸಿದ್ದಪ್ಪ ಸವದಿ ಅವರ ಇರುವಿಕೆಯನ್ನು ಗುರುತಿಸಿದ್ದು, ಅವುಗಳನ್ನು ಆರೋಪಿತರ ತೋಟದಲ್ಲಿ ತೆಗೆಯಲಾಗಿದೆ ಎಂದು 1 ನೇ ಆರೋಪಿ ಇರುವಿಕೆಯನ್ನು ಗುರುತಿಸಿದ್ದಾರೆ. ಪೋಟೋ ಪೋಟೋ ವಿದ್ಯುನ್ಮಾನ ದಾಖಲೆಯಾಗಿದ್ದು ಅದನ್ನು ಗುರುತಿಸುವಿಕೆಗೆ ಭಾರತ ಸಾಕ್ಷಾಧಿನಿಯಮ ಕಲಂ 65 ಬಿ ಅಡಿಯಲ್ಲಿ ಪ್ರಮಾಣ ಪತ್ರವನ್ನು ಸಲ್ಲಿಸಿರುವುದರಿಂದ

ಅವುಗಳನ್ನು ಕ್ರಮವಾಗಿ ನಿಪಿ-13 ರಿಂದ ನಿಪಿ-19 ಎಂದು ಗುರುತಿಸಲಾಯಿತು. ಫೋಟೋಗಳನ್ನು ಯಾವ ಕಾರಣಕ್ಕಾಗಿ ತೆಗೆಯಲಾಯಿತು ಎಂದು ನನಗೆ ಗೊತ್ತಿರುವುದಿಲ್ಲ.

6. ಮೋಟರಸೈಕಲನ್ನು ಯಾವ ಕಾರಣಕ್ಕಾಗಿ ಜಪ್ತು ಮಾಡಲಾಯಿತು ಎಂದು ನನಗೆ ಗೊತ್ತಿಲ್ಲ.

**(ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಸಾಕ್ಷಿದಾರರನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದಾರೆ. ಪಂಚನಾಮೆಯನ್ನು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು).**

**<u>ಪಾಟೀ ಸವಾಲುಃ ವಿಶೇಷ ಸರ್ಕಾರಿ ಅಭಿಯೋಜಕರಿಂದ</u>**

ಪೋಲಿಸರು ನೀಡಿರುವ ನೋಟಿಸನಲ್ಲಿ ಸಾಕ್ಷಿ ತಮ್ಮ ಸಹಿಯನ್ನು ಗುರುತಿಸಿದ್ದಾರೆ. ನೋಟಿಸನ್ನು ನಿಪಿ-20 ಎಂದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ-20 [ಎ] ಎಂದು ಗುರುತಿಸಲಾಯಿತು. ಆ ನೋಟಿಸಿನ ಪ್ರಕಾರ ಪೋಲಿಸರು ನನ್ನನ್ನು ಐಗಳಿ ಪೋಲಿಸ ಠಾಣೆಗೆ ಕರೆಸಿದ್ದರು ಎನ್ನುವುದು ಸರಿ. ನಾನು ಪೋಲಿಸ ಠಾಣೆಗೆ ಹೋದಾಗ 1 ನೇ ಆರೋಪಿ ಸಹ ಪೋಲಿಸ ಠಾಣೆಯಲ್ಲಿದ್ದರು ಎನ್ನುವುದಕ್ಕೆ ಸಾಕ್ಷಿ ನಾನು ಠಾಣೆಯ ಒಳಗೆ ಹೋಗಿಲ್ಲ, ಠಾಣೆಯ ಹೊರಗೆ ಸಹಿ ಮಾಡಿ ಬಂದಿದ್ದೇನೆ ಎಂದು ಹೇಳಿದ್ದಾರೆ.

2. 1 ನೇ ಆರೋಪಿ ಜಗಳದ ಸಮಯದಲ್ಲಿ ಉಪಯೋಗಿಸಿದ ಮೋಟರಸೈಕಲನ್ನು ತೋರಿಸಿ ಹಾಜರುಪಡಿಸುತ್ತೇನೆ ಎಂದು ಮತ್ತು ಚಾಸಾಃ 8 ಮತ್ತು ಚಾಸಾಃ 9 ರವರಿಗೆ ಹಲ್ಲೆ ಮಾಡಲು ಉಪಯೋಗಿಸಿದ ಆಯುಧಗಳನ್ನು ಹಾಜರುಮಾಡುತ್ತೇನೆ ಎಂದು ಹೇಳಿದ್ದರಿಂದ ಪೋಲಿಸರು 1 ನೇ ಆರೋಪಿಯು ತೋರಿಸಿದ ಸ್ಥಳಕ್ಕೆ ಕರೆದುಕೊಂಡು ಹೋದರು ಎನ್ನುವುದು ಸರಿಯಲ್ಲ.

3. 1 ನೇ ಆರೋಪಿ ನನ್ನನ್ನು, ಪೋಲಿಸರು ಮತ್ತು ಚಾಸಾಃ 5 ಸಿದ್ದಪ್ಪ ಸವದಿ ಅವರನ್ನು ಅವರ ತೋಟಕ್ಕೆ ಕರೆದುಕೊಂಡು ಹೋಗಿ ತೋಟದಲ್ಲಿದ್ದ ಬಾವಿಯ ಬಳಿ ಇರಿಸಿದ್ದ ಕೇಬಲ್ ವಾಯರ್ ಮತ್ತು ಮೋಟರಸೈಕಲನ್ನು ಹಾಜರುಪಡಿಸಿದನು ಎನ್ನುವುದು ಸರಿಯಲ್ಲ. ಅವುಗಳನ್ನು ಪೋಲಿಸರು ನನ್ನ ಸಮಕ್ಷಮ ಜಪ್ತು ಮಾಡಿಕೊಂಡರು ಎನ್ನುವುದು ಸರಿಯಲ್ಲ. ಅಲ್ಲಿಂದ ಮುಂದೆ 1 ನೇ ಆರೋಪಿ ತಮ್ಮ ತೋಟದಲ್ಲಿದ್ದ ದನದ ಕೊಟ್ಟಿಗೆಯ ಹತ್ತಿರ ಕರೆದುಕೊಂಡು ಹೋಗಿ 6 ನೇ ಆರೋಪಿ ಚಾಸಾಃ 9 ರವರಿಗೆ ಹೊಡೆಯಲು ಬಳಸಿದ ಕಬ್ಬಿಣದ ರಾಗೋಲನ್ನು ಹಾಜರುಪಡಿಸಿದನು ಎನ್ನುವುದು ಸರಿಯಲ್ಲ. ಪೋಲಿಸರು ಒಂದು ಚೀಟಿಯಲ್ಲಿ ನನ್ನ ಸಹಿ ಮಾಡಿಸಿಕೊಂಡು ಜಪ್ತು ಮಾಡಲಾದ ವಸ್ತುಗಳ ಮೇಲೆ ಅಂಟಿಸಿರುತ್ತಾರೆ ಎನ್ನುವುದು ನನಗೆ ಗೊತ್ತಿಲ್ಲ.

4. ನ್ಯಾಯಾಲಯದಲ್ಲಿ ಹಾಜರುಮಾಡಿರುವ ಮು.ಮಾ.2 ರಿಂದ 4 ನ್ನು ನನ್ನ ಸಮಕ್ಷಮ ಜಪ್ತು ಮಾಡಲಾಯಿತು ಎನ್ನುವುದು ಸರಿಯಲ್ಲ. ಪೋಲಿಸರು ನಿಪಿ–12 ಪಂಚನಾಮೆಯನ್ನು ನನ್ನ ಸಮಕ್ಷಮ ತಯಾರಿಸಿ ಸ್ಥಳದಲ್ಲಿ ನನ್ನ ಸಹಿ ಮಾಡಿಸಿಕೊಂಡಿರುತ್ತಾರೆ ಎನ್ನುವುದು ಸರಿಯಲ್ಲ. ನಿಪಿ–12 ಪಂಚನಾಮೆ ಸಮಯದಲ್ಲಿ ನಿಪಿ–13 ರಿಂದ ನಿಪಿ–19 ಪೋಟೋಗಳನ್ನು ತೆಗೆಯಲಾಯಿತು ಎನ್ನುವುದು ಸರಿ.

5. ನಿಪಿ–12 ಪಂಚನಾಮೆಯನ್ನು ನನ್ನ ಸಮಕ್ಷಮ ಮಾಡಿದ್ದು, ಮು.ಮಾ.1 ರಿಂದ 4 ನ್ನು ನನ್ನ ಸಮಕ್ಷಮ ಜಪ್ತು ಮಾಡಿದ್ದರೂ ಸಹ ಈಗ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

**ಪಾಟೀ ಸವಾಲು: ಆರೋಪಿತರ ಪರ ಶ್ರೀ.ಎಮ್.ಎಸ್.ಪಿ ವಕೀಲರಿಂದ**

ನಾನು 1 ನೇ ಆರೋಪಿಯ ಮನೆಯ ಮುಂದೆ, ಅವರ ತೋಟದಲ್ಲಿರುವ ಬಾವಿಯ ಪಕ್ಕದಲ್ಲಿ ಮತ್ತು ಪೋಲಸ ಠಾಣೆಯಲ್ಲಿ ಒಟ್ಟು 5 ಸಹಿಗಳನ್ನು ಮಾಡಿದ್ದೇನೆ. ಪೋಲಿಸರು ಎಷ್ಟು ಪೋಟೋಗಳನ್ನು ತೆಗೆದರು ಎಂದು ನನಗೆ ನೆನಪಿಲ್ಲ. ಪೋಲಿಸರು ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಜಪ್ತು ಮಾಡಿಕೊಂಡಿಲ್ಲ ಎನ್ನುವುದು ಸರಿ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಸವಿತಾ ಕುಮಾರಿ ಎನ್)
3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.